ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly. KOPPA-CHM. ಫೋನ್ : 114

8ನೇ ವರ್ಷ 44ನೇ ಸಂಚಿಕೆ ಕೊಪ್ಪ 1-7-1990 ಭಾನುವಾರ ಬೆಲೆ 60 ಪೈಸೆ

ಕೋಗಿನಬೈಲು ಯೋಗೀಂದ್ರ ನಾಯ್ಕ್ ಅಸಹಜ ಸಾವು :

ಪೋಲೀಸರ ತನಿಖೆಯಲ್ಲಿ ಪ್ರಗತಿ ?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ : ಕಿಗ್ಗಕ್ಕೆ ಸಮೀಪದ ಕೋಗಿನ ಬೈಲು ಯೋಗೀಂದ್ರ ನಾಯ್ಕ್ ಕಳೆದ ತಿಂಗಳು ಸಂಶಯಾಸ್ಪದ ರೀತಿಯಲ್ಲಿ ಸಾವ ನ್ನಪ್ಪಿದ್ದು, ಇದು ಅವರ ಸೋದರರಿಂದಲೇ ನಡೆದ ಕೊಲೆ ಎಂಬುದು ಈಗಾಗಲೇ ಇಡೀ ತಾಲ್ಲೂಕಿನ ಎಲ್ಲ ಕಡೆ ಜನಜನಿತ ವಾಗಿದೆ

ಆದರೆ ಮಹಜರು ನಡೆಸಿದ ಪೋಲೀಸ್ ದಫೇದಾರ್ ಇದನ್ನು ಕುಡಿದ ಅಮಲಿನಲ್ಲಿ ಆತ್ಮಹತ್ಯೆ ಅಥವಾ ಸಹಜ ಸಾವು-ಎಂಬ ರೀತಿಯಲ್ಲಿ ದಾಖಲಿಸಿದಾರೆಂದು ಹೇಳ ಲಾಗುತ್ತಿದ್ದು, ಎಲ್ಲೆಡೆ ಅಪಹಾಸ್ಯಕ್ಕೆ ಕಾರಣ ವಾಗಿದೆ

ಈ ಬಗ್ಗೆ ತನಿಖೆ ನಡೆಸಿ ತಕ್ಕ ಕ್ರಮ ಕೈಗೊಳ್ಳುವುದಾಗಿ ಸಬ್ ಇನ್‌ಸ್ಪೆಕ್ಟರ್ ಮರಿಗೌಡ ಅಂದಿನಿಂದಲೂ ಹೇಳುತ್ತ, "ಇನ್ನೊಂದು ನಾಲ್ಕಾರು ದಿನ...." ಎನ್ನುತ್ತಲೇ ಬರುತ್ತಿದ್ದಾರೆ. ಈ ಬಾರಿ ಕೇಳಿದಾಗಲೂ, "2-3 ಜನ ಅಪರಾಧಿಗಳ ಸುಳಿವು ಸಿಕ್ಕಿದ್ದು, ಇನ್ನೊಂದು ನಾಲ್ಕೈದು ದಿನ...." ಎಂದಿದ್ದಾರೆ.

ಈಗಾಗಲೇ ಪ್ರಕರಣದ ಬಹುತೇಕ ಸಾಕ್ಷ್ಯಾಧಾರಗಳೆಲ್ಲ ಹಾಳಾಗಿರುವ ಸಂಭವ ವಿದ್ದು, ಅಪರಾಧಿಗಳು ತಲೆ ತಪ್ಪಿಸಿಕೊಳ್ಳು ವುದನ್ನೂ ಈ ಪೋಲೀಸರು ಕಾಯುತ್ತಿದ್ದಾರೋ-ಎಂಬ ಶಂಕೆಯ ಮಾತು ಎಲ್ಲ ಕಡೆ ಕೇಳಿ ಬರುತ್ತಿದೆ.

ಬಾಳೆಹೊನ್ನೂರಲ್ಲಿ ಆಭರಣದಂಗಡಿ ದರೋಡೆ

(ವರದಿ : ಎಂ. ಯೂಸುಫ್)

ಬಾಳೆಹೊನ್ನೂರು : ಇಲ್ಲಿನ 'ಆಭರಣ ಜ್ಯೂಯೆಲರ್ಸ್' ಅಂಗಡಿಗೆ ಜೂನ್ 19ರ ರಾತ್ರಿ ಕಳ್ಳರು ನುಗ್ಗಿ, ಗಿರಾಕಿಗಳ ಆರ್ಡರ್ ಮತ್ತು ರಿಪೇರಿಗೆ ಕೊಟ್ಟಿದ್ದ ಆಭರಣಗಳೂ ಸೇರಿದಂತೆ ಸುಮಾರು 75 ಸಾವಿರ ರೂ. ಬೆಲೆಯ ಚಿನ್ನ-ಬೆಳ್ಳಿ ಆಭರಣಗಳನ್ನು ಲೂಟಿ ಮಾಡಿದ್ದಾರೆ.

ಅಂಗಡಿ ಮಾಲೀಕ ತುಳಸೀದಾಸ್ ರಾಯ್ಕರ್ ತಮ್ಮ ಊರಾದ ಕಾರವಾರಕ್ಕೆ ಹೋಗಿದ್ದಾಗ ಈ ದರೋಡೆ ನಡೆದಿದೆ. ಅಂಗಡಿಗೆ ಶಟರ್ಸ್ ಹಾಕಿದ್ದು, ಬೀಗ ಮುರಿಯದೆ, ಶಟರ್ಸನ್ನೇ ಮಧ್ಯದಲ್ಲಿ ಕಬ್ಬಿಣದ ಸಲಾಖೆಯಿಂದ ಹಿಂದಕ್ಕೆ ಬಾಗಿಸಿ, ತಳದ ಸಿಮೆಂಟ್ ಕಿತ್ತು ಹಾಕಿ ಕಳ್ಳರು ಒಳಗೆ ನುಗ್ಗಿದ್ದಾರೆ. ಇದರಿಂದ ಶಟರ್ಸ್‌ಗಳ ಭದ್ರತೆಯ ಬಗ್ಗೆ ಕೂಡ (ಗುಣ ಮಟ್ಟದ ಬಗ್ಗೆ) ಸಂದೇಹ ಪಡುವಂತಾಗಿದೆ.

ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಇಲ್ಲಿನ ಠಾಣಾಧಿಕಾರಿ-ಇಬ್ಬರೂ ಹೊಸಬರಾಗಿದ್ದು, ಈ ಪ್ರಕರಣ ಅವರಿಗೊಂದು ಸವಾಲಾಗಲಿದೆ.

ಗಂಧ ವಶ, ಲಾರಿ ಜಪ್ತಿ

ಮಿನಿ ಲಾರಿಯೊಂದರ ಕ್ಯಾಬಿನ್‌ನಲ್ಲಿ ವಿಶೇಷವಾಗಿ . ರಚಿಸಿದ ಪೆಟ್ಟಿಗೆಯಲ್ಲಿ ಅಡಗಿಸಿ ಮಂಗಳೂರು ಕಡೆಗೆ ಸಾಗಿಸುತ್ತಿದ್ದ ಸುಮಾರು 45 ಸಾವಿರ ರೂ. ಬೆಲೆಯ 450 ಕಿಲೊ ಗಂಧವನ್ನು ಬಾಳೆಹೊನ್ನೂರು ವಲಯದ ನೂತನ ಅರಣ್ಯಾಧಿಕಾರಿ ಚಂದ್ರಪ್ರಭ ಮತ್ತು ಅವರ ಸಿಬ್ಬಂದಿ ಜೂನ್ 24 ರಂದು ಸೀಗೋಡು ಬಳಿ ವಶಪಡಿಸಿಕೊಂಡಿದ್ದಾರೆ.

ಫಾರೆಸ್ಟರ್‌ಗಳಾದ ಗೋವಿಂದ ರಾಜ್, ತಿಮ್ಮಯ್ಯ, ಗೋಪಾಲ್, ಗಾರ್ಡ್‌ಗಳಾದ ತಿಮ್ಮಾನಾಯ್ಕ್, ಗುಂಡಪ್ಪ, ಮಂಜುನಾಥ್ ಹಾಗೂ ಡ್ರೈವರ್ ವಾಸುದೇವ ಇವರುಗಳು ದಾಳಿಯ ತಂಡದಲ್ಲಿದ್ದರು.

ಕೊಪ್ಪ ನಡು ಪೇಟೆಯಲ್ಲಿ ಪ್ರತಿ ಸಂಜೆ ಟ್ರಾಫಿಕ್ ಜಾಮ್ ತಪ್ಪಿಸಲು ಮನವಿ

ಕೊಪ್ಪ : ಇಲ್ಲಿನ ಮಧ್ಯ ಪೇಟೆಯಲ್ಲಿರುವ ಸಿದ್ದಿ ಮಹಮದ್‌ರವರ ಕ್ಲಬ್ ಎದುರಿಗೆ ಪ್ರತಿ ದಿನ ಸಂಜೆ ಆರೇಳು ಗಂಟೆಯ ನಂತರ ಹಲವು ಪ್ರತಿಷ್ಠಿತರ ಕಾರು-ಜೀಪುಗಳು ನಿಲ್ಲುತ್ತಿದ್ದು, ಇದರಿಂದ ಪ್ರತಿ ದಿನ ಪದೇ ಪದೇ ವಾಹನಗಳ ಓಡಾಟಕ್ಕೆ ಬಿಕ್ಕಟ್ಟು (ಟ್ರಾಫಿಕ್ ಜಾಮ್) ಉಂಟಾಗುತ್ತಿದೆಯೆಂದು ನಾಗರಿಕರು ದೂರಿದ್ದಾರೆ.

ಜೂನ್ 29ರ ರಾತ್ರಿ 8-05 ರಿಂದ 8-25ರವರೆಗೆ ಉಂಟಾದ ಬಿಕ್ಕಟ್ಟಿನಿಂದಾಗಿ ಸುಮಾರು 25ಕ್ಕೂ ಹೆಚ್ಚು ವಾಹನಗಳು ಕರ್ಕಶವಾಗಿ ಹಾರ್ನ್ ಹೊಡೆಯುತ್ತ ನಿಂತಿದ್ದು, ಸುತ್ತಮುತ್ತಲ ವ್ಯಾಪಾರಸ್ಥರ, ನಾಗರಿಕರ ಮತ್ತು ಪಾದಚಾರಿಗಳ ಶಾಂತಿಯನ್ನು ಕೆಡಿಸುವಂತಾಯಿತು.

ಮುಖ್ಯ ರಸ್ತೆಯ ಈ ಭಾಗ ಹಾಗೂ ಬಸ್ ಸ್ಟ್ಯಾಂಡ್ ಪ್ರವೇಶಿಸುವ ಭಾಗ ತುಂಬಾ ಇಕ್ಕಟ್ಟಾಗಿದ್ದು, ಈ ಸ್ಥಳಗಳಲ್ಲಿ ದಿನದ ಯಾವುದೇ ವೇಳೆಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ಪ್ರತಿಬಂಧಿಸಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ. ಮಂಡಲ ಪಂಚಾಯ್ತಿ ಮತ್ತು ಪೋಲೀಸರು ಕೂಡ ಈ ಗಮನಿಸಬೇಕು.

ಶೃಂಗೇರಿ ಲಯನ್ಸ್ ಕ್ಲಬ್ ಪುನರಾರಂಭ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಇಲ್ಲಿ 70 ರ ದಶಕದಲ್ಲಿ ಕೆಲವು ವರ್ಷ ನಡೆದು ನಿಂತುಹೋಗಿದ್ದ ಲಯನ್ಸ್ ಕ್ಲಬ್ ಪುನರಾರಂಭಗೊಂಡಿದ್ದು, ಜೂನ್ 17 ರಂದು ಅದರ ಜಿಲ್ಲಾ ಗೌರ್ನರ್ ಡಾ|| ಶಿವಲಿಂಗಪ್ಪನವರು ಉದ್ಘಾಟಿಸಿದರು. ಕ್ಲಬ್ಬಿನ ನೂತನ ಅಧ್ಯಕ್ಷ ಕೆ. ವಿ. ರಾಮುಪ್ಪಯ್ಯ ಅಧ್ಯಕ್ಷತೆ ವಹಿಸಿದ್ದು, ಮಂಗಳೂರು ಲಯನ್ಸ್ ಕ್ಲಬ್ ಅಧ್ಯಕ್ಷರು ಮುಖ್ಯ ಅತಿಥಿಯಾಗಿದ್ದರು

ಸೇವೆ ಮತ್ತು ಸಂಪರ್ಕವೇ ಮುಖ್ಯ ಉದ್ದೇಶವಾಗುಳ್ಳ ಲಯನ್ಸ್ ಸಂಸ್ಥೆ ಪ್ರಪಂಚದಾದ್ಯಂತ 166 ದೇಶಗಳಲ್ಲಿ ಶಾಖೆಗಳನ್ನು ಹೊಂದಿ ಸ್ನೇಹ-ಸಂಪರ್ಕಗಳನ್ನು ಬೆಸೆಯುತ್ತಿದೆ ಎಂದ ಡಾ|| ಶಿವಲಿಂಗಪ್ಪ, ಲಯನ್ಸ್ ಸದಸ್ಯರು ಇತರರಿಗೆ ಮಾದರಿಯಾಗಿರಬೇಕೆಂದರು.

ರಾಮುಪ್ಪಯ್ಯ ಮಾತನಾಡಿ, ಉಳ್ಳವರು-ಇಲ್ಲದವರ ಭೇದ ತೀವ್ರವಾಗಿರುವ ನಮ್ಮ ದೇಶದಲ್ಲಿ, ಬಡವರು ಸಹ ದೇಶದ ಪ್ರಗತಿಯಲ್ಲಿ ಪಾಲ್ಗೊಳ್ಳುವಂತೆ ಸಹಕರಿಸುವಲ್ಲಿ ನಮ್ಮ ಸೇವೆ ಮೀಸಲಾಗಬೇಕು ಎಂದರು. ಸಹಾಯಕ ಕಾರ್ಯದರ್ಶಿ ಸಿದ್ಧಪ್ಪ ಕಾರ್ಯಕ್ರಮ ನಿರ್ವಹಿಸಿದರು.

ಪೂರ್ತಿ ಇಂಗ್ಲಿಷ್‌ಮಯವಾಗಿದ್ದ ಇಡೀ ಕಾರ್ಯಕ್ರಮದಲ್ಲಿ, ಮಂಗಳೂರಿನ ಡಾ|| ಶಿವಸ್ವಾಮಿ ಎಂಬೊಬ್ಬರು ಮಾತ್ರ ಕನ್ನಡದಲ್ಲಿ ಮಾತನಾಡಿ ನಾವಿರುವ ಜಾಗವನ್ನು ನೆನಪಿಗೆ ತಂದರು. ಡಾ|| ಶಿವಲಿಂಗಪ್ಪ ಇಂಗ್ಲಿಷಿನಲ್ಲಿ ಮಾತಾಡುತ್ತ ಕನ್ನಡದ ಗಾದೆಗಳನ್ನು ಉದಹರಿಸುತ್ತಿದ್ದುದು ಮೋಜು ತರುವಂತಿತ್ತು.

ಕ್ಯಾನ್ಸರ್ ರೋಗ ಪತ್ತೆ ಹಚ್ಚುವ ಮತ್ತು ಉಚಿತ ಸಲಹೆ, ಶಿಕ್ಷಣದ ಶಿಬಿರ

ಚಿಕ್ಕಮಗಳೂರು ನಗರದ ಜೇಸೀ ರೀಟ್ಸ್ ಆಶ್ರಯದಲ್ಲಿ ಜುಲೈ 14 ಮತ್ತು 15 ರಂದು ಉಚಿತವಾಗಿ ಕ್ಯಾನ್ಸರ್ ರೋಗ ಪತ್ತೆ ಹಚ್ಚುವ ಶಿಬಿರ ಏರ್ಪಟ್ಟಿದೆ. **ಶಿಬಿರವು ಜುಲೈ 14 ರಂದು ಶನಿವಾರ ಮಧ್ಯಾಹ್ನ 2-30 ರಿಂದ ಸಂಜೆ 6 ರ ವರೆಗೆ ಹಾಗೂ ಜುಲೈ 15 ರಂದು ಭಾನುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಎಂ. ಇ ಎಸ್. ಶಾಲಾ ಆವರಣದಲ್ಲಿ ನಡೆಯಲಿದೆ.**

ಬೆಂಗಳೂರಿನ ಹೆಸರಾಂತ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಪ್ರೊ|| ಅನಂತ್ ಹಾಗೂ ಇತರ 20 ಮಂದಿ ವೈದ್ಯರು ಈ ಶಿಬಿರದಲ್ಲಿ ಕ್ಯಾನ್ಸರ್ ಪತ್ತೆಗೆ ತಪಾಸಣೆ ನಡೆಸುವುದಲ್ಲದೆ, ಈ ಕುರಿತು ಉಚಿತ ಸಲಹೆ, ಶಿಕ್ಷಣ ನೀಡುವರು ಹಾಗೂ ಚಲನ ಚಿತ್ರ ಮತ್ತು ಸ್ಲೈಡ್‌ಗಳ ಮೂಲಕ ಸಹ ವಿವರಿಸುವರು.

ಈ ಶಿಬಿರದಲ್ಲಿ ಮಹಿಳಾ ವೈದ್ಯರುಗಳು ಮಹಿಳೆಯರ ಮುಟ್ಟು ದೋಷ, ಗರ್ಭಕೋಶದ ತೊಂದರೆಗಳು ಹಾಗೂ ಇನ್ನಿತರ ಸಮಸ್ಯೆಗಳ ಬಗ್ಗೆ ಸಹ ಪರೀಕ್ಷೆ ನಡೆಸುವರು.

ಸಾರ್ವಜನಿಕರು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಜೇಸೀ ರೀಟ್ಸ್ ಅಧ್ಯಕ್ಷೆ ಶಾಲಿನಿ ಮೋಹನ್ ವಿನಂತಿಸಿದ್ದಾರೆ.

ಕೊಪ್ಪ ಗ್ರಂಥಾಲಯ : ಮತ್ತೆ 10 ದಿನ ರಜೆ !

ಕೊಪ್ಪ : ಕೊಪ್ಪದ ಸಾರ್ವಜನಿಕ ಗ್ರಂಥಾಲಯ ದೀರ್ಘ ಕಾಲ ಬಾಗಿಲು ಮುಚ್ಚಿದ ಬಗ್ಗೆ ಕಳೆದ ವಾರವಷ್ಟೇ 'ಮುಂಜಾವು' ಓದುಗರು ದೂರಿದ್ದರು. ಅಷ್ಟರಲ್ಲಾಗಲೇ ಪುನಃ ಹತ್ತು ದಿನ - ಜರೂರಿ ರಜವೆಂದು ಮುಚ್ಚಿದ ಬಾಗಿಲ ಮೇಲೆ ಚೀಟಿ ಅಂಟಿಸಿದ್ದಾರೆ ಎಂದಿರುವ ಓದುಗರು. ಕೊನೇ ಪಕ್ಷ ಗ್ರಂಥಾಲಯ ಸಹಾಯಕರು ರಜೆ ಹೋದಾಗ ಆಯಾ ದಿನದ ಪತ್ರಿಕೆಗಳಾದರೂ ಓದುಗರಿಗೆ ಸಿಗುವಂತೆ ಸ್ಥಳೀಯರನ್ನು ಇಲಾಖೆ ನೇಮಿಸಿಕೊಳ್ಳಬಾರದೆ? ಎಂದು ಕೇಳಿದ್ದಾರೆ.

ಇಲ್ಲಿನ ಕೆಲಸದ ಉಸ್ತುವಾರಿಯನ್ನು 100 ಕಿಲೋ ಮೀಟರ್ ದೂರದ ಚಿಕ್ಕಮಗಳೂರಿನ ಕೇಂದ್ರ ಗ್ರಂಥಾಲಯದಿಂದ ಗಮನಿಸಲು ಸಾಧ್ಯವೆ ? ಅದರ ಬದಲು ಪುರಸಭೆಯವರಿಗೆ ಅಥವಾ ತಹಸೀಲ್ದಾರರಿಗೆ ಉಸ್ತುವಾರಿ ವಹಿಸಲಿ ಎಂದಿದ್ದಾರೆ. ಶಾಸಕರು ಅಥವಾ ಜಿಲ್ಲಾ ಪರಿಷತ್ತಿನವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಕೊಪ್ಪ ಮಂಡಲ ಪಂಚಾಯ್ತಿ :

ನೂತನ ಪ್ರಧಾನರೆದುರಿನ ಕವಲು ಹಾದಿ

ಕೊಪ್ಪ ಮಂಡಲ ಪಂಚಾಯ್ತಿಯ ಪ್ರಧಾನರಾಗಿ ಕಾಂಗ್ರೆಸ್‌ನ ಪಿ ಬಿ. ವಿವೇಕ್ ಆಯ್ಕೆಯಾಗಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸುತ್ತಲೇ, ಅವರ ಮುಂದಿರುವ ಸಮಸ್ಯೆಗಳು ಮತ್ತು ಪ್ರಶ್ನೆಗಳ ಸ್ವರೂಪವನ್ನೂ, ಅವರ ಮುಂದಿರುವ ಕವಲು ದಾರಿಯನ್ನೂ ಅವರ ಗಮನಕ್ಕೆ ತರುವ ಪ್ರಯತ್ನ ಇಲ್ಲಿದೆ.

ಅವರ ಮುಂದಿರುವ 2 ಮುಖ್ಯ ಸಂಗತಿಗಳೆಂದರೆ ಒಂದು–ಅವರ ಹಿಂದಿನ ಕೆಲವು ಅಧ್ಯಕ್ಷರುಗಳು, ಅದರಲ್ಲೂ ಮುಖ್ಯವಾಗಿ ಮಂಜುನಾಥ ಶೆಟ್ಟಿಯವರು, ಹಲವಾರು ಲೋಪದೋಷಗಳ ಮಧ್ಯೆಯೂ ಪಟ್ಟಣದ ಅಭಿವೃದ್ಧಿಯ ಕೆಲಸ ಕಾರ್ಯಗಳನ್ನು ಗಣನೀಯವಾಗಿ ಸಾಧಿಸಿ, ಸಾಕಷ್ಟು ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಹೊಸ ಅಧ್ಯಕ್ಷರು, (ಪ್ರಧಾನರು) ಅವರಿಗೆ ಸರಿಗಟ್ಟುವುದು ಮಾತ್ರವಲ್ಲ, ಅವರನ್ನೂ ಮೀರಿಸುವಷ್ಟು ಸಾಧನೆ ಮಾಡಿದರೆ ಮಾತ್ರ "ಯಶಸ್ವಿ" ಎನ್ನಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಅಪಖ್ಯಾತಿ ಕಟ್ಟಿಟ್ಟ ಬುತ್ತಿ. ಅದರ ಕಪ್ಪು ನೆರಳು, ಅವರು ಈಗಷ್ಟೇ ಪ್ರವೇಶಿಸಿರುವ ಸಕ್ರಿಯ ರಾಜಕಾರಣದಲ್ಲೂ ಸಹ ಅವರನ್ನು ಉದ್ದಕ್ಕೂ ಬೆನ್ನು ಹತ್ತುತ್ತದೆ.

ಎರಡು–ಜನರ ಮನಸ್ಸಿನಲ್ಲಿ ಅವರ ಬಗೆಗೆ ಇರುವ ಚಿತ್ರಣ. ಇದು ಬಹಳ ಮುಖ್ಯವಾದ ಅಂಶ. ಕೊಪ್ಪದಲ್ಲಿ ವಿವೇಕ್‌ರಿಗೆ ಈವರೆಗಿನ ಸಾರ್ವಜನಿಕ ಸಂಪರ್ಕವೆಂದರೆ ಹೆಚ್ಚಾಗಿ ಅವರ ಸರೀಕರು, ಬೆರಳೆಣಿಕೆಯಷ್ಟು ಮೇಲ್ವರ್ಗದ ಜನರು ಮತ್ತು ಪುಢಾರಿಗಳು ಮಾತ್ರ. ಕೊಪ್ಪವೆಂಬ ಪುಟ್ಟ ಬಾವಿಯಲ್ಲಿ ಪ್ರತಿಷ್ಠಿತರೆನ್ನಿಸಿಕೊಂಡವರದಷ್ಟೇ ಬಳಕೆ. ಅದಕ್ಕಿಂತ ಹೆಚ್ಚಿನ ಬಳಕೆಯೆಂದರೆ, ನಾಲ್ಕೈದು ವರ್ಷಗಳಿಗೊಮ್ಮೆ ಪ್ರಮುಖ ಚುನಾವಣೆಗಳು ಬಂದಾಗ ತಮ್ಮ ಪಕ್ಷದ ಮುಖಂಡರ ಜೊತೆ ಓಟು ಕೇಳಲು ಮನೆ–ಮನೆಗೆ ತಿರುಗಿದ್ದು ಮಾತ್ರ. ಕಳೆದ 9 ವರ್ಷಗಳ ನನ್ನ ಅನುಭವದಲ್ಲಿ, ಇದಕ್ಕಿಂತ ಹೆಚ್ಚಿನ ಜನ ಬಳಕೆಯನ್ನು ಅವರು ಬೆಳೆಸಿಕೊಂಡದ್ದನ್ನು ನಾನು ಕಂಡಿಲ್ಲ.

(ಮಂಜುನಾಥ ಶೆಟ್ಟರೂ ಪುರಸಭಾಧ್ಯಕ್ಷರಾದಾಗ ರಾಜಕೀಯಕ್ಕೆ ಹೆಚ್ಚೂ ಕಮ್ಮಿ ಹೊಸಬರೇ. ಆದರೆ ಅವರಿಗೆ ಸಾಮಾನ್ಯ ಜನರ ಸಂಪರ್ಕ–ಬಳಕೆ ಜಾಸ್ತಿ ಇತ್ತು.)

ಮೇಲಾಗಿ ವಿವೇಕ್ ಯಾರಾದರೂ ಯಾವುದೇ ನೆರವು ಕೋರಿ ತಮ್ಮಲ್ಲಿಗೆ ಬಂದವರಿಗೆ 'ಇಲ್ಲ'ವೆನ್ನುವವರಲ್ಲ ಎಂಬ ಮಾತಿದೆಯಾದರೂ, ಸಾಮಾನ್ಯ ಜನರ ದೃಷ್ಟಿಯಲ್ಲಿ ಅವರೆಂದರೆ ದರ್ಪಿಷ್ಟ, ಅಹಂಕಾರಿ, ಮುಂಗೋಪಿ ಎಂದೇ ಹೆಚ್ಚು ಪ್ರಚಲಿತ. ಈಎರಡೂ ಕೊರತೆಗಳನ್ನು ತುಂಬಿಕೊಂಡು ಹೊಸ ಪ್ರಧಾನರು ಜನರ ವಿಶ್ವಾಸ ಗಳಿಸಿ ಕೆಲಸ ಮಾಡಬೇಕಾಗಿದೆ.

'ಪ್ಲಸ್ ಪಾಯಿಂಟ್'ಗಳು

ವಿವೇಕ್ ಅವರ ಸ್ವಂತ ಕೆಲಸಗಳಲ್ಲಿ ಶಿಸ್ತು, ಅಚ್ಚುಕಟ್ಟು, ದಕ್ಷತೆ, ದೃಢ ನಿರ್ಧಾರ, ಹಿಡಿದ ಕೆಲಸ ಬಿಡದ ಛಲ ಎದ್ದು ಕಾಣುತ್ತವೆ. ಮಂಡಲ ಪ್ರಧಾನರೊಬ್ಬರಿಗೆ ಈ ಗುಣಗಳಿದ್ದರೆ, ಪಟ್ಟಣದ ಕೆಲಸಗಳಿಗೆ ಅಪಾರ ಪ್ರಯೋಜನವಾಗುತ್ತದೆ. ಹಿಂದಿನ ಪ್ರಧಾನರ ಬಹು ದೊಡ್ಡ ದೌರ್ಬಲ್ಯ—ಸ್ವಂತ ನಿರ್ಧಾರಕ್ಕಿಂತಲೂ ಮೂರ್ನಾಲ್ಕು ಮಂದಿ ಕುತಂತ್ರಿ ಮತ್ತು ಸ್ವಾರ್ಥಿಗಳಾದ ಸದಸ್ಯರ ಮರ್ಜಿಗೆ ಮಣಿಯುವುದೇ ಆಗಿತ್ತು; ಅವರಿಗೆ ಸಾಕಷ್ಟು ಅಪಖ್ಯಾತಿ ತಂದ ಅಂಶ ಇದೇ ಆಗಿತ್ತು–ಎಂಬುದನ್ನಿಲ್ಲಿ ಸ್ಮರಿಸಬಹುದು.

ಹೀಗೆ, ಸಾಕಷ್ಟು ಆಲೋಚಿಸಿ ತೆಗೆದುಕೊಂಡ ಸ್ವಂತ ನಿರ್ಧಾರಗಳನ್ನು ಪಕ್ಷದ ಕಾರ್ಯಕರ್ತರ ಒತ್ತಡಕ್ಕೂ ಸಹ ಅನಗತ್ಯವಾಗಿ ಮಣಿಯದೆ ದೃಢವಾಗಿ ಜಾರಿಗೊಳಿಸುತ್ತ ಹೋದರೆ ಸಾಮಾನ್ಯ ಜನರ ಕೆಲಸ ಬಹಳ ಆಗುತ್ತದೆ. ಇದರಿಂದ ಆರಂಭಕ್ಕೆ ಸ್ವಲ್ಪ ಮಟ್ಟಿಗೆ ದೂರು – ಅಸಮಾಧಾನ ಮೂಡಬಹುದು. ಹಿಂದಿನ ಅಧ್ಯಕ್ಷರು ಬಸ್ ಸ್ಟ್ಯಾಂಡ್ ಹೋಟೆಲ್ ಬಿಡಿಸಿದಾಗ ಹಾಗೂ ಬಸ್ ಸ್ಟ್ಯಾಂಡ್ ಅಂಗಡಿಗಳನ್ನು ಮರು ಹರಾಜು ಮಾಡಿದಾಗ ತೆಗೆದುಕೊಂಡ ದೃಢ ಕ್ರಮಗಳು ಅವರಿಗೆ ಸ್ವಲ್ಪ ಮಟ್ಟಿಗೆ ಕೆಟ್ಟ ಹೆಸರನ್ನೇ ತಂದಿದ್ದವು. ಆದರೆ ಅದರಿಂದ ಪುರಸಭೆಗೆ (ಊರಿಗೆ) ಒಳ್ಳೆಯದೇ ಆಯಿತು.

ಕುಡಿವ ನೀರು : ಬೃಹತ್ ಸಮಸ್ಯೆ

ಕೊಪ್ಪದಲ್ಲಿ ಶುದ್ಧವಾದ ಕುಡಿವ ನೀರಿನ ಪೂರೈಕೆಯೇ ಬಹು ದೊಡ್ಡ ಸವಾಲಾಗಿರುವ ಸಮಸ್ಯೆ. ಏಳೆಂಟು ವರ್ಷಗಳ ಹಿಂದೆ ನೀರು ವಿತರಣೆಯ ವ್ಯವಸ್ಥೆ ಕೂಡ ಅಸ್ತವ್ಯಸ್ತವಾಗಿತ್ತು. ಎಲ್ಲೂ ನೀರಿನ ಹತೋಟಿ ವಾಲ್ವ್‌ಗಳಿಲ್ಲದೆ, ನೀರೆಲ್ಲ ಕೆಳಗಿನ ಪೇಟೆಗೇ ಹರಿಯುತ್ತಿತ್ತು. ಆದರೆ ಆಗಿನ ಅನುಭವಿ ಮುಖ್ಯಾಧಿಕಾರಿ ಗುಂಡೂರಾವ್ ಮತ್ತು ಕೌನ್ಸಿಲ್‌ನ ಕೆಲ ಸದಸ್ಯರ ಸತತ ಯತ್ನದಿಂದಾಗಿ ಈಗ, ನೀರಿನ ಪೂರೈಕೆಯೊಂದು ಸಾಕಷ್ಟಿದ್ದರೆ, ಹಂಚಿಕೆಯಲ್ಲಿ ಹೆಚ್ಚಿನ ದೂರುಗಳಿಗೆ ಅವಕಾಶವಿರುವುದಿಲ್ಲ. ಸಣ್ಣಪುಟ್ಟ ಸಮಸ್ಯೆಗಳಿರಬಹುದು. ಅವುಗಳ ನಿವಾರಣೆ ಕಷ್ಟವೇನಲ್ಲ.

ನೀರು ಸಂಗ್ರಹಣೆಗಾಗಿ ಇನ್ನೂ 1 ಲಕ್ಷ ಗ್ಯಾಲನಿನ ಇನ್ನೊಂದು ನೆಲಮಟ್ಟದ ಟ್ಯಾಂಕ್ ಹಾಗೂ ನೀರು ಸೋಸುವ ವ್ಯವಸ್ಥೆ, ಜೊತೆಗೆ ಹರಿಹರಪುರ ಹೊಳೆಯಿಂದ ಹೆಚ್ಚು ನೀರೆತ್ತುವ ಸಾಮರ್ಥ್ಯಕ್ಕಾಗಿ ಹೆಚ್ಚು ಸಾಮರ್ಥ್ಯದ ಪಂಪ್‌ಸೆಟ್ ಮತ್ತು ಹರಿಹರಪುರ ಹೊಳೆಯ ಬಳಿ ಇನ್ನಷ್ಟು ಪೂರಕ ಸೌಕರ್ಯ, ವ್ಯವಸ್ಥೆ–ಇವುಗಳನ್ನೊಳಗೊಂಡ ಸಮಗ್ರ ಯೋಜನೆ 1983 ರಲ್ಲೇ ತಯಾರಾಗಿ ಸರ್ಕಾರಕ್ಕೆ ಹೋಗಿದೆ. ಆದರೆ ಆಗಿನಿಂದಲೂ ಪೂರ್ತಿ ಯೋಜನೆ ಮಂಜೂರಾಗದೆ, ಚೂರುಪಾರು ಹಣ ಬಂದುದರಿಂದ ಇಡೀ ಯೋಜನೆ ಹಾಗೇ ಉಳಿದಿದ್ದು, ಬಹುಶಃ ಇಂದು ಅದರ ವೆಚ್ಚ 25–30 ಲಕ್ಷಗಳಾಗಬಹುದು.

ಈ ಯೋಜನೆಯನ್ನು ಹೇಗಾದರೂ ಮಂಜೂರು ಮಾಡಿಸಿಕೊಂಡು, ಊರಿಗೆ **ದಿನಕ್ಕೆ 2 ಹೊತ್ತು, ಸೋಸಿದ ನೀರನ್ನು ಒದಗಿಸುವ** ಕೆಲಸವನ್ನು ನೂತನ ಪ್ರಧಾನರು ತಮಗೊಂದು ಸವಾಲಾಗಿ ತೆಗೆದುಕೊಂಡರೆ, ಬಹು ದೊಡ್ಡ ಕೆಲಸವೊಂದನ್ನು ಸಾಧಿಸಿದಂತೆ.


ನೀರು ಪೂರೈಕೆ ಅವ್ಯವಸ್ಥೆ (ಹರಿಹರಪುರದಿಂದ ನೀರೆತ್ತುವ ವ್ಯವಸ್ಥೆ) ಬಗ್ಗೆ ಐದಾರು ವರ್ಷದ ಹಿಂದೆ ಅವರೊಮ್ಮೆ ನನ್ನೊಡನೆ ಹೇಳಿದ ಮಾತನ್ನು ಇಲ್ಲಿ ಸ್ಮರಿಸುತ್ತೇನೆ: "ಪುರಸಭೆಯವರಿಗೆ ಇದನ್ನು ಸರಿಪಡಿಸಲಾಗದಿದ್ದರೆ ನಮಗೆ ವಹಿಸಲಿ. ನಮ್ಮ ಇಂಜಿನಿಯರುಗಳಿದ್ದಾರೆ. ಯಾವ ಸಮಸ್ಯೆಯೂ ಬಾರದಂತೆ ಪಕ್ಕಾ ಮಾಡಿಕೊಡುತ್ತೇವೆ" ಎಂದಿದ್ದರು. ಅವರ ಈ ಅನುಭವದ ಪ್ರಯೋಜನ ಈ ಊರಿಗೆ ದೊರಕಿಸುವ ಸದವಕಾಶ ಅವರಿಗೆ ಈಗ ಒದಗಿ ಬಂದಿದೆ.

(3ನೇ ಪುಟಕ್ಕೆ)

"ಹಣದ ಗಂಟಿದ್ದರೆ ಊರೆಲ್ಲ ನೆಂಟರು !"

ಒಂದೂರಿನಲ್ಲಿ ಜಯರಾಮಯ್ಯನೆಂಬ ಧನಿಕನಿದ್ದ. ಅವನ ಒಬ್ಬನೇ ಮಗ ಶಿವರಾಮನಿಗೆ ಮದುವೆ ಏರ್ಪಾಡಾಯಿತು. ಭಾರೀ ಮದುವೆ; ಎಲ್ಲೆಲ್ಲೂ ಅಬ್ಬರ, ಆಡಂಬರ

ಜಯರಾಮಯ್ಯನ ಸೋದರಳಿಯ ರಾಜುವೂ ಮದುವೆಗೆಂದು ಬಂದ. ಅವನು ಬಡವ. ಆದ್ದರಿಂದ ಸರಳವಾದ ಉಡುಗೆ ಯಲ್ಲಿದ್ದ ಅವನು ಒಳಗೆ ಬರುವುದನ್ನು ಕಂಡ ಜಯರಾಮಯ್ಯ ದೂರದಿಂದಲೇ



...ದರಿದ : ಯಾರಯ್ಯ ಅದು? ಊಟ ಹಾಕುತ್ತಾರೆಂದು ಒಳಗೆ ನುಗ್ಗಿಬಿಟ್ಟೆಯ? ...ಂದು ಅಗ ರಾಜು ಹೇಳಿದ–"ನನ್ನ ...ರುತು ಸಿಗಲಿಲ್ಲವೆ ಮಾವ? ನಾನು ನಿನ್ನ ...ದರಳಿಯ ರಾಜು...."

"ಓಹೋ, ಸೋದರಳಿಯನೇ? ...ಪ್ಪ ಒಳ್ಳೆ ಬಟ್ಟೆ ಹಾಕಿಕೊಂಡು ಬರ... ...ನಾ ...? ಹೋಗು, ಯಾರಿಗೂ ...ಣದಂತೆ ...ನೆ ಮನೆಗೆ ಹೋಗಿ, ಊಟ ...ಾಡಿ ...ದು ಹೋಗು !" ಎಂದ ಮಾವ ... ಮಾತು ರಾಜುವನ್ನು ಕೆರಳಿಸಿತು. ತಾನು ಬಡವನಾದರೇನು, ಸ್ವಾಭಿಮಾನವಿಲ್ಲವೆ ? ಎಂದು ಯೋಚಿಸಿದವನೇ ಸರಸರನೆ ಹೊರಟು ಹೋದ.

ಏಳೆಂಟು ವರ್ಷ ಕಳೆಯಿತು. ನಗರದ ಪ್ರಖ್ಯಾತ ಜವಳಿ ಅಂಗಡಿ ಮಾಲೀಕ ರಾಜು. ಒಂದು ದಿನ ಮಧ್ಯಾಹ್ನ ಊಟ ಮುಗಿಸಿ ಕುಳಿತಿದ್ದ. ಬಾಗಿಲಲ್ಲಿ ಯಾರೋ ನಿಂತು, 'ಒಳಗೆ ಬರಬಹುದೆ ?' ಎಂದರು. ರಾಜುವಿಗೆ ಗುರುತು ಹತ್ತಿತು. ಆದರೂ ತೋರಿಸಿಕೊಳ್ಳದೆ, ಕೆಲಸದವನಿಗೆ "ಭಿಕ್ಷದವರನ್ನೆಲ್ಲ ಯಾಕೆ ಒಳಗೆ ಬಿಡುತ್ತೀರಿ ?" ಎಂದು ಗದರಿಸಿದ.

ಬಂದಿದ್ದವ ಜಯರಾಮಯ್ಯ. ಅವನ ಆಡಂಬರ, ಸೋಮಾರಿ ಶಿವರಾಮ ಮತ್ತು ಅವನ ಹೆಂಡತಿಯ ವಿಲಾಸ ಜೀವನ–ಇವುಗಳಿಂದಾಗಿ ಆಸ್ತಿಯೆಲ್ಲ ಕರಗಿತ್ತು. ರಾಜುವಿನ ಮಾತು ಕೇಳಿ ಅವನಿಗೆ ದುಃಖವಾಯಿತು. ಹೇಳಿದ–"ನನ್ನ ಗುರುತು ಸಿಗಲಿಲ್ಲವೆ ರಾಜು ? ನಾನು ನಿನ್ನ ಸೋದರ ಮಾವನಲ್ಲವೆ....?"

"ಓಹೋ ಸೋದರ ಮಾವನೋ ? ಹಣದ ಗಂಟಿದ್ದರೆ ಊರೆಲ್ಲ ನೆಂಟರೇ ! ಸೋದರ ಮಾವನೇ ಯಾಕಾಗಬೇಕು...." ಎಂದು ರಾಜು ಮೂದಲಿಸಿದ.

ಆದರೆ ತಕ್ಷಣವೇ ಎದ್ದು ಬಾಗಿಲಿಗೆ ಹೋಗಿ ಮಾವನನ್ನು ಕೈ ಹಿಡಿದು ಒಳಗೆ ಕರೆತಂದು ಕೂರಿಸಿಕೊಂಡ. ಜಯರಾಮಯ್ಯ ನಾಚಿ, ತಲೆತಗ್ಗಿಸಿದ. ಪಶ್ಚಾತ್ತಾಪದಿಂದ ಕಣ್ಣೀರು ಮಿಡಿದ. ರಾಜು ಅವನನ್ನು ಸಂತೈಸಿದ.

—ಪಿ. ಸುಮಿತ್ರ,
6ನೇ ತರಗತಿ, ಉತ್ತಮೇಶ್ವರ.

ಕಳೆದು ಸಿಕ್ಕ ಗೊಂಬೆ

ನನ್ನತ್ರ ಎಂಥ ಚಂದ ಗೊಂಬೆಯಿತ್ತು ಕಣ್ರೀ
ಎಲ್ಲರದ್ದಕ್ಕಿಂತಾನೂ ನಂದು ಸುಂದರಿ
ಕೆಂಪು ತುಟಿ, ಬಿಳೀ ಕೆನ್ನೆ, ದೊ....ಡ್ಡ ಕಣ್ಣು
ತಲೆಯಂತೂ ಗುಂಗುರು ಗುಂಗರಿ.
ಇದೇ ಪಾರ್ಕಲ್ಲಿ ಇಟ್ಕೊಂಡು ಆಡ್ತಿದ್ದೆ ಕಣ್ರೀ
ಎಲ್ಲೋ ನನ್ಗೊಂಬೆ ಕಳ್ದೇ ಹೋಯ್ತು
ಇಡೀವಾರ ಅತ್ಕೊಂಡು ಹುಡುಕಿದೆ ಕಣ್ರೀ
ಎಲ್ಲಿಟ್ಟೆ ಅನ್ನೋದು ಮರ್ತೇ ಹೋಯ್ತು

* * * *

ಒಂದಿವಸ ನನ್ಗೊಂಬೆ ಸಿಕ್ಬಿಡ್ತು ಕಣ್ರೀ
ಅಲ್ಲೇ ಆ ಪೊದೆ ಗಿಡದ ಆ ಸಂದೀಲಿ
ಬಣ್ಣವೆಲ್ಲ ಹೋಗಿ ಕಂದಿ ಕಪ್ಗಾಗಿತ್ತು ಕಣ್ರೀ
ನೋಡಕ್ಕಾಗ್ತಿರ್ಲಿಲ್ಲ ಅದನ್ನ ಆ ಚಂದೀಲಿ.
ಒಂದು ಕೈನ ಹಸು ಅಪ್ಪಚ್ಚಿ ಮಾಡಿತ್ತು ಕಣ್ರೀ
ತಲೆಯಂತೂ ಜಿ ಜಿ ಬರೀ ವಂದರಿ,
ಆದ್ರೂನೂ ನನ್ ಗೊಂಬೆ ಹಳೇ ಹಳತು ಕಣ್ರೀ
ಎಲ್ಲರದ್ದಕ್ಕಿಂತಾನು ನೆನಪು ಸುಂದರಿ

(ವಂದರಿ = ಸಾರಣೆ)

—ಎಚ್. ಪಾಂಡುರಂಗ ವಿಠಲ.

ಓದುಗರ ಪತ್ರಗಳು

ಉಪಪ್ರಧಾನರದೇ ಕಂಟ್ರಾಕ್ಟ್: ಕುಸಿಯುತ್ತಿರುವ ಗ್ರಾಮೀಣ ಬಸ್ ನಿಲ್ದಾಣ !

ಪ್ರಿಯರೆ,

ಶೃಂಗೇರಿ ತಾಲ್ಲೂಕ್ ನೀಲಂದೂರು ಗ್ರಾಮದ ಬೋಳೂರಿನಲ್ಲಿ ಆಗುಂಬೆ-ಶೃಂಗೇರಿ ರಸ್ತೆಯಲ್ಲಿ ಇತ್ತೀಚಿಗೆ ನಿರ್ಮಾಣವಾಗಿರುವ ಗ್ರಾಮಾಂತರ ಬಸ್ ನಿಲ್ದಾಣ ಕೇವಲ ನೋಡುವವರಿಗೆ 'ಇಲ್ಲೊಂದು ನಿಲ್ದಾಣವಿದೆ' ಎಂದು ಗುರುತಿಸಲು ಮಾತ್ರ ಇದ್ದಂತಿದೆ. ಏಕೆಂದರೆ ಈಗ ನಿಲ್ದಾಣ ಸಂಪೂರ್ಣ ಸೋರುತ್ತಿದ್ದು, ಸಿಮೆಂಟ್ ಗಾರೆಯೆಲ್ಲಾ ಕೆಳಗೆ ಬೀಳುತ್ತಿದೆ. ಇದು ಹೀಗೇ ಮುಂದುವರಿದರೆ ಆಕಸ್ಮಿಕವಾಗಿ ಪ್ರಯಾಣಿಕರ ಮೇಲೆ ನಿಲ್ದಾಣ ಕುಸಿದರೂ ಆಶ್ಚರ್ಯವೇನಿಲ್ಲ. ಅಷ್ಟೊಂದು ದುರ್ಬಲವಾಗಿರುವ ನಿಲ್ದಾಣದ ಮೇಲು ಹೊದಿಕೆ ನಿರ್ಮಿಸುವಾಗಲೇ ಜಖಂ ಆಗಿತ್ತು. ಆಗ ಈ ವಿಷಯವನ್ನು ಮಂಡಲ್ ಸದಸ್ಯರಿಗೂ ತಿಳಿಸಿದರೆ, ಅವರು ಏನೂ ಹೇಳದೆ ತಪ್ಪಿಸಿಕೊಂಡರು.

ಕಿಗ್ಗ (ಮರ್ಕಲ್) ಮಂಡಲ ವ್ಯಾಪ್ತಿಗೆ ಬರುವ ಈ ನಿಲ್ದಾಣವನ್ನು ಮಂಡಲ ಉಪ-ಪ್ರಧಾನರೇ ಕಂಟ್ರಾಕ್ಟ್ ವಹಿಸಿ ನಿರ್ಮಾಣ ಮಾಡಿದ್ದೆಂದು ತಿಳಿದು ಬಂದಿದೆ. ಇಂತಹ ಅವ್ಯವಹಾರಗಳನ್ನು ಸರಿಪಡಿಸಬೇಕಾದ ಮುಂದಾಳುಗಳೇ ಇಂಥ ಕೆಲಸ ಮಾಡಿದ್ದಾರೆಂದ ಮೇಲೆ ಜನರು ಯಾರಿಗೆ ದೂರು ನೀಡಬೇಕು ?

ಸಂಬಂಧಪಟ್ಟವರು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಂದು ಆಶಿಸಬಹುದೆ ?

—ಎಸ್. ಕೆ. ಜಗದೀಶ್,
ಸೊನ್ನೆಕೊಡಿಗೆ.

ಪರಿಸರ ಉಳಿಸಬೇಕು — ಆದರೆ ಯಾರಿಗಾಗಿ ?

ಪ್ರಿಯರೆ,

ಇತ್ತೀಚಿಗೆ 'ಮುಂಜಾವು' ಪರಿಸರದ ಬಗ್ಗೆ ಅತಿ ಕಾಳಜಿಯುಳ್ಳ ಪತ್ರಿಕೆಯಾಗುತ್ತಿದೆಯೇ? ಹಾಗೆಂದೇ ಅನಿಸುತ್ತದೆ.

ಪರಿಸರದ ಬಗೆಗಿನ ನಿಮ್ಮ ಪ್ರೇಮ ಖಂಡಿತ ಸರಿ. ಆದರೆ ಪರಿಸರ ಉಳಿಸಿ ಎನ್ನುವ ಮಾತು ಬಂದಾಗ ಯಾರಿಗಾಗಿ? ಅನ್ನುವ ಪ್ರಶ್ನೆ ಏಳುತ್ತದೆ. ಯಾರಿಗಾಗಿ ಈ ಪರಿಸರ? ಬಡವರಿಗೆ, ಕಾರ್ಮಿಕರಿಗಾಗಿಯಂತೂ ಅಲ್ಲ.

ಯಾಕೆಂದರೆ, ಅದೊಂದು ಕಾಲವಿತ್ತು. ಪರಿಸರದ ಜೊತೆಗೇ ಬದುಕಿದ ಜನರಿದ್ದ, ಪರಿಸರವನ್ನು ದೇವಿ, ದೇವರು, ಹೀಗೆ ಪೂಜ್ಯ ಭಾವನೆಯಿಂದ ತಮ್ಮದೇ ಆದ ಅನಾಗರಿಕ (?) ರೀತಿಯಿಂದ ಪೂಜಿಸಿದ ಜನರಿದ್ದರು. ಪರಿಸರಕ್ಕೆ ಮೂಲ ಕಾರಣವಾದ ಕಾಡು-ಮರ-ಗಿಡಗಳ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿರಲಿಲ್ಲ. ಅಂದಿನ ನಾಗರಿಕ ಪ್ರಪಂಚ ಇವರನ್ನು ಊರೊಳಗೆ ಸೇರಿಸದೆ ಕಾಡೊಳಗೆ ದೂಡಿತ್ತು. ಕಿರಾತಕರು, ಬೇಡರು, ಕೊರಗರು, ಅನ್ನುತ್ತಿದ್ದರು ಅವರಿಗೆ. ಕಾಡೊಳಗೆ ಬೇಲಿಗಳಾಗಲೀ ಗಡಿಗಳಾಗಲೀ ಅವರಿಗೆ ಇರಲಿಲ್ಲ.

ಆದರೆ, ಕ್ರಮೇಣ ನಾಡೊಳಗಿದ್ದ ಜನ ಈ ಕಾಡೊಳಗೆ ನುಗ್ಗಿದರು, ಬೇಲಿ ಹಾಕಿದರು. ಎಲ್ಲೆಗಳನ್ನು ಸ್ಥಾಪಿಸಿದರು. ಭೂಮಿ ದಾಹಕ್ಕೆ ಒಳಗಾದರು. ಪರಿಸರದ ಆ ಮುಗ್ಧ ಮಕ್ಕಳನ್ನು ತಮ್ಮ ಜೀತದಾಳಾಗಿಸಿದರು. ಇಂದಿಗೂ ಆ ಪರಿಸರದ ಮಕ್ಕಳಲ್ಲಿ ತುಂಡು ಭೂಮಿ ಇಲ್ಲದವರು ಇದ್ದಾರೆ. ಪರಿಸರವನ್ನು ವಧಿಸಿ ತಿಂದು ಕೊಬ್ಬಿದ ಈ ಜನರ ಏಳಿಗೆಗಾಗಿ 'ಪರಿಸರ ಉಳಿಸಿ' ಚಳವಳಿ ಪ್ರಾರಂಭವಾಗಿದೆಯೆ? ಹಾಗೆಂದೇ ಅನಿಸುತ್ತದೆ.

ಏಕೆಂದರೆ ಪರಿಸರ ಉಳಿದರೂ ನಾಶವಾದರೂ ಇಂದಿನ ಪರಿಸ್ಥಿತಿಯಲ್ಲಂತೂ ಅಂದಿನ ಪರಿಸರದ ಮಕ್ಕಳ ಬದುಕು ದಯನೀಯ. ಊರು ಬೇಡ ಕಾಡೊಳಗೆ ಹೋಗೋಣವೆಂದರೆ ಅಲ್ಲೂ ಜಾಗವಿಲ್ಲ. ಹಾಗಿದ್ದರೆ ಯಾರಿಗಾಗಿ ಈ ಪರಿಸರ? "ಮೂಲಭೂತ"ವಾದವನ್ನು ನೀವು ಮಂಡಿಸಬಹುದು.

(4ನೇ ಪುಟಕ್ಕೆ)

ಉತ್ತಮೇಶ್ವರ ಗೃಹಿಣಿಗೆ ಬುದ್ಧಿ ಸ್ವಸ್ಥವಿತ್ತು; ಅವಳ ಆತ್ಮಹತ್ಯೆಯ ಕಾರಣ ಪತ್ತೆಯಾಗಲಿ

ಪ್ರಿಯ ಸಂಪಾದಕರೆ,

ದಿನಾಂಕ 24-6-90ರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ "ಹಸುಳೆಗಳೊಂದಿಗೆ ತಾಯಿಯ ಆತ್ಮಹತ್ಯೆ" ಎಂಬ ವರದಿಯ ಕೆಲವು ಅಂಶಗಳನ್ನು ಕಂಡು ಬಹಳ ದುಃಖವಾಯಿತು.

ನಾನು ಮೃತ ಚಂದ್ರಮತಿಯ (ಟಿ. ಎಸ್. ಚಂದ್ರಶೇಖರ, ಇಂದಿರಾ ನಗರ, ಉತ್ತಮೇಶ್ವರ—ಇವರ ಪತ್ನಿಯ) ತಂಗಿ. ನಾನಾಗಲಿ ಅಥವಾ ನನ್ನ ತಂದೆಯವರಾಗಲಿ ಯಾವುದೇ ಸಂದರ್ಭದಲ್ಲಿ ಮೃತ "ಚಂದ್ರಮತಿಗೆ ತಲೆ ಸರಿ ಇರಲಿಲ್ಲ" ಎಂದು ತಿಳಿಸಿಲ್ಲ. ಮತ್ತು ಯಾವುದೇ ಸಮಯದಲ್ಲಿ ಆಕೆಗೆ ತಲೆ ಕೆಟ್ಟಿರುವುದೂ ಇಲ್ಲ. ತಮ್ಮ ಊಹೆಯಂತೆ ಆಕೆಯ ಸಾವಿಗೆ ಪ್ರಬಲವಾದ ಕಾರಣವಿರಬಹುದು. ಕಾರಣ ಪತ್ತೆ ಹಚ್ಚುವಲ್ಲಿ ಪೋಲೀಸರು ಪ್ರಯತ್ನಿಸಬೇಕು.

ಚಂದ್ರಮತಿಯ ಮಕ್ಕಳಲ್ಲಿ ಹಿರಿಯಳಾದ 7 ವರ್ಷದ ಪದ್ಮಾವತಿಯ ಶವವನ್ನು ಸೀತಾ ನದಿಯಲ್ಲಿ ನೋಡಿದ ಅಕ್ಕಪಕ್ಕದ ನಿವಾಸಿಗಳು ಇದ್ದಾರೆ; ಪೋಲೀಸ್ ಠಾಣೆಗೂ ದಿನಾಂಕ 13-6-90ರಂದು ಅನಾಥ ಶವ ಇರುವ ಬಗ್ಗೆ ದೂರು ನೀಡಿದ್ದು ಪೋಲೀಸರು ಬರುವಾಗ ಶವ ಸಿಕ್ಕಿಲ್ಲ.

ಪುಷ್ಪಾ (4) ಬಗ್ಗೆ ಯಾವುದೇ ಸಮಾಚಾರ ತಿಳಿದಿಲ್ಲ. ಮೃತ ಮಕ್ಕಳ ತಂದೆ ಅಥವಾ ಅವರ ಕಡೆಯವರು ಮಕ್ಕಳ ಶವ ಪತ್ತೆ ಹಚ್ಚುವಲ್ಲಿ ಯಾವುದೇ ಶ್ರಮ ತೆಗೆದುಕೊಂಡಿಲ್ಲ.

—ಎ.ಎಲ್. ಉಮಾದೇವಿ,
ಅಂಬುಗೋಡು – ಕಿಗ್ಗ.

ಉಚಿತ ಸಸಿ ವಿತರಣೆ: ಒಂದು ಸೂಚನೆ

ಪ್ರಿಯರೆ,

ಸಾಮಾಜಿಕ ಅರಣ್ಯ ಯೋಜನೆಯಡಿ ಅರಣ್ಯ ಇಲಾಖೆಯವರು ರೈತರಿಗೆ, ಸಾರ್ವಜನಿಕರಿಗೆ ಉಚಿತವಾಗಿ ವಿತರಿಸುತ್ತಿರುವ ಸಸಿಗಳ 'ಜಾತಿಗಳು', ಬೆಳವಣಿಗೆ ಮತ್ತು ಹಂಚಿಕೆಯ ಬಗೆಗಿನ ಕೆಲವು ಕುಂದು ಕೊರತೆಗಳನ್ನು ನಾವು ಇಲಾಖೆಯ ಗಮನಕ್ಕೆ ತಂದಿದ್ದೆವು.

ಈ ಬಾರಿ ಸದರಿ ಯೋಜನೆಯ ನಾಗಲಾಪುರ ನರ್ಸರಿಯಲ್ಲಿ ರೈತರಿಗೆ ಉಪಯುಕ್ತವಾಗುವ ಸಿಲ್ವರ್, ಅಂಟುವಾಳ, ಉಪ್ಪಾಲದ ಗೇರು ಮುಂತಾದ ಹಲವು ಬಗೆಯ ನಾಟ, ಸೊಪ್ಪು, ಉರುವಲು, ಹಣ್ಣು-ಹಂಪಲು ಮತ್ತು ಜೇನು ಪೋಷಣೆಗೆ ಬೇಕಾಗುವಂಥ ಗಿಡಗಳನ್ನು ಚೆನ್ನಾಗಿ ಬೆಳೆಸಿದ್ದು, ಈಗಾಗಲೇ ರೈತರಿಗೆ ವಿತರಿಸುತ್ತಿದ್ದಾರೆ.

ಅಲ್ಲದೆ, ಪೇಟೆಯಲ್ಲಿ ಮನೆಗಳ ಹಿಂದು-ಮುಂದಿನ ಅಲ್ಪ-ಸ್ವಲ್ಪ ಜಾಗೆಗಳಲ್ಲಿ ನೆಡಲು 5 ರಿಂದ 25 ಗಿಡಗಳೊಳಗೆ ಬೇಕಿರುವವರು ಅಷ್ಟಕ್ಕಾಗಿ ನರ್ಸರಿಗೆ ಹೋಗಿ ಸಸಿಗಳನ್ನು ತರಲು ಸಾಧ್ಯವಾಗದ್ದರಿಂದ, ನಮ್ಮ ಕೋರಿಕೆಯಂತೆ, ಕೊಪ್ಪ ಚಿಟ್ಟೆಮಕ್ಕಿ ದೇವಸ್ಥಾನದ ಹಿಂದುಗಡೆ 'ಪವಿತ್ರ ವನ' ಬೆಳೆಸಲು ಸಸಿಗಳನ್ನು ತರುವಾಗ ರೈತರಿಗೆ ಬೇಕಾಗುವ ಸಸಿಗಳನ್ನೂ ತಂದು, ಸ್ಥಳದಲ್ಲೇ ಅರ್ಜಿಗಳನ್ನು ಪಡೆದು ವಿತರಿಸುವುದಾಗಿ ಯೋಜನೆಯ ವಲಯ ಅರಣ್ಯಾಧಿಕಾರಿ ಚಂದ್ರಶೇಖರ ಆಚಾರ್ ತಿಳಿಸಿದ್ದಾರೆ.

ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲೆಂದು ಆಶಿಸುತ್ತೇವೆ.

—ಎಚ್. ಭುಜಂಗರಾವ್,
ಹತ್ಲಕೊಡಿಗೆ;
ವಸಂತ ಕುಮಾರ್ ಹರ್ಡೀಕರ್,
ಹರಂದೂರು.

ನೂತನ ಪ್ರಧಾನರೆದುರಿನ ಕವಲು ಹಾದಿ

(2ನೇ ಪುಟದಿಂದ)

ದುರ್ವಾಸನೆ, ಅನೈರ್ಮಲ್ಯ

ಎರಡನೆಯದಾಗಿ, ಕೊಪ್ಪ ಬಸ್ ಸ್ಟ್ಯಾಂಡ್ ಮೂತ್ರಿ ಹಾಗೂ ಬಸ್‌ಸ್ಟ್ಯಾಂಡ್ ಕಡೆಯಿಂದ ಕೆಳಗೆ ಹರಿಯುವ ಚರಂಡಿಯ ದುರ್ನಾತದ ಸಮಸ್ಯೆಯೂ ಈವರೆಗೆ ಯಾವುದೇ ಪರಿಹಾರೋಪಾಯಕ್ಕೆ ಜಗ್ಗಿಲ್ಲ. ಹಿಂದೊಮ್ಮೆ 'ಸುಲಭ್ ಶೌಚಾಲಯ'ದ ಸಲಹೆ ಮೂಡಿ ಬಂದಿತ್ತು. ಅನಂತರ ಏನೋ ತಾಂತ್ರಿಕ ಅಡಚಣೆಗಳೋ ಇನ್ನೊಂದೋ ಆಗಿ ಅದು ಕಾರ್ಯಗತವಾಗಲಿಲ್ಲ. ಈಗಲಾದರೂ ಈ ಸಮಸ್ಯೆಗೊಂದು ಸಮಗ್ರ ಪರಿಹಾರೋಪಾಯ ಹುಡುಕಬೇಕಾಗಿದೆ

ಕೆಲವು ಸಣ್ಣ-ಪುಟ್ಟ ಸಮಸ್ಯೆಗಳು

ಮತ್ತೆ, ಹಲವಾರು ರಸ್ತೆಗಳ ಬದಿಯ ಚರಂಡಿಗಳು ನಾದುರಸ್ತಾಗಿವೆ. ಒಂದು ಮಳೆ ಬಂತೆಂದರೆ ಅಲ್ಲಲ್ಲಿ ಕೊಳಚೆ ನೀರು ರಸ್ತೆಯ ಮೇಲೆ ಹರಿಯತೊಡಗುತ್ತದೆ. ಭಾರತ್ ರೈಸ್ ಮಿಲ್ ರಸ್ತೆಯಲ್ಲಿ ಜೀವವಿಮಾ ಕಛೇರಿಯಿಂದ ಮುಂದಕ್ಕೆ ಚರಂಡಿ ವ್ಯವಸ್ಥೆ ಪೂರ್ತಿಯಾಗಿಲ್ಲ. ಹೊಸ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸಲು ರಸ್ತೆ ಅಗೆದಿರುವುದನ್ನು ಮುಚ್ಚುವುದು ಕೂಡ ಪುರಸಭೆಗೆ (ಮಂಡಲಕ್ಕೆ) ಹೊರೆಯೇನಲ್ಲ. (ಅದಕ್ಕೆ ನಿವಾಸಿಗಳು ಹಣ ಕಟ್ಟಿದ್ದೂ ಆಗಿದೆ.) ಆದರಲ್ಲಿ ಒಂದು ರಸ್ತೆ ಜಿಲ್ಲಾ ಪರಿಷತ್ತಿಗೆ ಸೇರಿದ್ದಾದರೂ ಮಂಡಲದವರೇ ಪ್ಯಾಚ್ ವರ್ಕ್ ಮಾಡಿಸಿದರೆ ತಪ್ಪೇನಿಲ್ಲ. ಅಥವಾ ಜಿ. ಪ. ಇಂಜಿನಿಯರ್‌ಗಳಿಗೆ ಹೇಳಿಯಾದರೂ ಮಾಡಿಸಬೇಕು.

ಬೀದಿ ನಾಯಿಗಳ ಹಾಗೂ ಹುಚ್ಚು ನಾಯಿಗಳ ಕಾಟ, ಬೀದಿ ದೀಪ ಹಾಗೂ ಅಲ್ಲಲ್ಲಿ ಒಸರುವ ಪೈಪ್ ಮತ್ತು ನಲ್ಲಿಗಳ ದುರಸ್ತಿ, ಆಸ್ಪತ್ರೆ ಆವರಣದ ನೈರ್ಮಲ್ಯ, ಸಂತೆ ಮೈದಾನ ಶುಚಿತ್ವ ಇವೇ ಮುಂತಾದ ಸಣ್ಣ-ಪುಟ್ಟ ಸಮಸ್ಯೆಗಳೂ ಇವೆ.

ಶಾಲೆಯೋ, ನರಕವೋ ! ?

ಇನ್ನೊಂದು ಮುಖ್ಯ ಸಮಸ್ಯೆ ಶಾಲೆಗಳದು. ಕಾನ್ವೆಂಟ್ ಶಾಲೆ ಮತ್ತು ಟೌನ್ ಮಿಡ್ಲ್ ಸ್ಕೂಲ್‌ಗಳ ಬಳಿ ಇಳಿಜಾರಿದ್ದು, ವಾಹನಗಳ ವೇಗವನ್ನು ಅನಿವಾರ್ಯವಾಗಿ ಮಿತಗೊಳಿಸಬಲ್ಲ ಏರ್ಪಾಡು ಬೇಕು. ಜೊತೆಗೆ, ಕಾನ್ವೆಂಟ್ ರಸ್ತೆಯಲ್ಲಿ ಮೇಲಿನಿಂದ ಕೆಳಕ್ಕೆ ದೊಡ್ಡ ವಾಹನಗಳು ಬರದಂತೆ ಪ್ರತಿಬಂಧಿಸಬೇಕೆಂಬ ಪೋಷಕರ ಹಲವು ವರ್ಷಗಳ ಒತ್ತಾಯ ಇನ್ನೂ ಈಡೇರಿಲ್ಲ. ಇದಕ್ಕಿಂತ ಕ್ರೂರವಾದ ಸಮಸ್ಯೆ ಕೋಮರಶೆಟ್ಟಿ ಶಾಲೆಯದು. ಮಾಂಸಕ್ಕಾಗಿ ಕುರಿಗಳನ್ನು ಕಡಿಯುವ ಹಾಗೂ ಅದರ ರಕ್ತ ಹರಿದು ಹೆಪ್ಪುಗಟ್ಟಿದ ಕ್ರೂರ ದೃಶ್ಯವಲ್ಲದೆ, ಮೀನು - ಮಾಂಸಗಳ ಅವಶೇಷದಿಂದಾಗಿ ವಿಪರೀತವಾದ ದುರ್ವಾಸನೆ, ನೊಣ-ಕ್ರಿಮಿ-ಕೀಟಗಳ ಹಾವಳಿಯಲ್ಲಿ ಈ ಶಾಲೆಯ ಎಳೆಯ ಮಕ್ಕಳು ದಿನ ದೂಡಬೇಕಾಗಿದೆ. ಮಂಡಲದವರು ಮನಸ್ಸು ಮಾಡಿದರೆ ಇದಕ್ಕೊಂದು ಮಾರ್ಗೋಪಾಯ ಕಲ್ಪಿಸುವುದು ಅಸಾಧ್ಯವಲ್ಲ (ಕಷ್ಟ ನಿಜ)

ಕವಲು ಹಾದಿ

ಹೀಗೆ ಕುಡಿವ ನೀರಿನ ಪೂರೈಕೆಯ ಬೃಹತ್ ಸಮಸ್ಯೆಯೊಂದನ್ನು ಬಿಟ್ಟರೆ, ಉಳಿದಂತೆ ನೂತನ ಅಧ್ಯಕ್ಷರಿಗೆ ಸವಾಲೆನ್ನಿಸಬಲ್ಲ ಅಗಾಧ ಸಮಸ್ಯೆಗಳಾವುವೂ ಇಲ್ಲವೆನ್ನಬಹುದು. ಪುರಸಭೆಯ ಹಣಕಾಸಿನ ಸ್ಥಿತಿ ಕೂಡ ಆತಂಕಕಾರಿಯಾಗೇನೂ ಇಲ್ಲ. ಆದ್ದರಿಂದ ತನಗೆ ದೊರೆತಿರುವ ಅಧಿಕಾರವನ್ನು ಯಾವ ರೀತಿಯಲ್ಲೂ ಸ್ವಾರ್ಥಕ್ಕೆ, ಸ್ವಜನ (ಸ್ವ-ಪಾರ್ಟಿ) ಪಕ್ಷಪಾತಕ್ಕೆ ಬಳಸಿಕೊಳ್ಳದೆ, ಊರಿನ ಹಿತವೊಂದನ್ನೇ ಗುರಿಯಾಗಿಟ್ಟುಕೊಂಡು ಯಶಸ್ವಿಯಾಗಬಲ್ಲ ಹಾದಿಯನ್ನು ನೂತನ ಪ್ರಧಾನರು ತುಳಿಯುತ್ತಾರೋ, ಅಥವಾ ಕಳೆದ ಎರಡು-ಮೂರು ವರ್ಷಗಳಲ್ಲಿ ಪುರಸಭೆಯೊಳಗೆ ಹೆಚ್ಚಿರುವ ಭ್ರಷ್ಟತೆಯ ಕೊಳಕು ಹಾದಿಯನ್ನೇ ತಾವೂ ತುಳಿಯುತ್ತಾರೋ – ಎಂಬುದು ಎಲ್ಲ ನಾಗರಿಕರೂ ಆತಂಕದಿಂದ ಎದುರು ನೋಡುತ್ತಿರುವ ಭವಿಷ್ಯದ ಪ್ರಶ್ನೆಯಾಗಿದೆ

—ಸಿರಿಮನೆ ನಾಗರಾಜ್.

ಚಿಕ್ಕೇಗೌಡ, ಸಂಜೀವರ ಮೇಲಿನ ಎಸ್ ಐ ಕ್ರಮಕ್ಕೆ ಪ್ರತಿಭಟನೆ; ಡಿಜಿಪಿಗೆ ದೂರು

ಕೊಪ್ಪ : ಇಲ್ಲಿನ ಶಂಕರ್ ಕಂಪೆನಿ ಕಾರ್ಮಿಕ ಮುಂದಾಳುಗಳು ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ಚುನಾಯಿತ ಪದಾಧಿಕಾರಿಗಳೂ ಆಗಿರುವ ಚಿಕ್ಕೇಗೌಡ ಮತ್ತು ಸಂಜೀವ ಅವರುಗಳ ಮೇಲೆ ಸಬ್ ಇನ್‌ಸ್ಪೆಕ್ಟರರು 'ರೌಡಿ ಶೀಟ್' ಕ್ರಮ ಜರುಗಿಸಿರುವುದಲ್ಲದೆ, ಅವರಿಗೆ ಕಾನೂನು ಬದ್ಧವಾದ ಜಾಮೀನು ಕೂಡ ಸಿಗದಂತೆ ವಿನಾಕಾರಣ ತಾ॥ಮ್ಯಾಜಿಸ್ಟ್ರೇಟ್‌ರವರನ್ನು ಒತ್ತಾಯಿಸಿ, ಅವರುಗಳನ್ನು ಜೈಲಿಗೆ ಕಳಿಸಿದ್ದನ್ನು ಸಿಪಿಐ ಮತ್ತು ಜಿಲ್ಲಾ ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ಮಜ್ದೂರ್ ಸಂಘ ತೀವ್ರವಾಗಿ ಖಂಡಿಸಿವೆ.

ಇದರ ವಿರುದ್ಧ ರಾಜ್ಯದ ಪೋಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದು, ಪೋಲೀಸರ ಈ ಕ್ರಮ ರಾಜಕೀಯ ಪುಡಾರಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವ ಮತ್ತು ಆಮಿಷಕ್ಕೆ ಒಳಗಾಗಿ ತೆಗೆದುಕೊಂಡಂಥ ಸಂವಿಧಾನ ಬಾಹಿರ ಕ್ರಮ ಎಂದು ಟೀಕಿಸಿವೆ.

ಕಲಾವಿದರಿಗೆ ಕೇಂದ್ರೀಯ ವಿದ್ಯಾರ್ಥಿವೇತನ

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಸಂಸ್ಕೃತಿ ಇಲಾಖೆಯು 1990-91 ನೇ ಸಾಲಿನಲ್ಲಿ ಸಂಗೀತ, ನೃತ್ಯ, ನಾಟಕ, ಲಲಿತ ಕಲೆ, ಅನ್ವಯಿಕ ಕಲೆ ಮತ್ತು ವಿವಿಧ ಸಾಂಪ್ರದಾಯಿಕ ಕಲೆಗಳಲ್ಲಿ ಪ್ರತಿಭೆ ಹೊಂದಿದ್ದು, ಈ ಬಗ್ಗೆ ವಿಶೇಷ ತರಬೇತಿ ಅವಶ್ಯಕ ಇರುವ 18ರಿಂದ 28 ವರ್ಷ ವಯೋಮಿತಿಯಲ್ಲಿರುವ (ದಿನಾಂಕ. 1-7-1961 ರಿಂದ 1-7-72ರ ನಡುವೆ ಜನಿಸಿದವರು) 150 ಯುವ ಕಲಾವಿದರಿಗೆ ವಿದ್ಯಾರ್ಥಿವೇತನ ನೀಡುವುದು ಇದರನ್ವಯ 2 ವರ್ಷಗಳ ಅವಧಿಯವರೆಗೆ ತಿಂಗಳಿಗೆ 400 ರೂ ಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು ಮತ್ತು ಅರ್ಹ ಕಲಾವಿದರಿಗೆ ಇನ್ನೂ ಒಂದು ವರ್ಷ ಮುಂದುವರಿಸಲಾಗುವುದು.

ಆಸಕ್ತಿಯುಳ್ಳ ಯುವ ಕಲಾವಿದರು ಅರ್ಜಿ ಮತ್ತು ಇತರ ವಿವರಗಳಿಗಾಗಿ 2 ರೂ.ಗಳ ಕ್ರಾಸ್ಡ್ ಇಂಡಿಯನ್ ಪೋಸ್ಟಲ್ ಆರ್ಡರನ್ನು "ಸೆಕ್ರೆಟರಿ, ಡಿಪಾರ್ಟ್‌ಮೆಂಟ್ ಆಫ್ ಕಲ್ಚರ್, ನ್ಯೂಡೆಲ್ಲಿ" ಇವರ ಹೆಸರಿಗೆ ಪಡೆದು, 28 × 12 ಸೆಂ.ಮೀ.ನ ಒಂದು ಅಂಚೆ ಚೀಟಿ ಹಚ್ಚಿದ ಸ್ವವಿಳಾಸದ ಲಕೋಟೆಯೊಂದಿಗೆ, Section Officer, Department of Culture, CH-3 Section, Centrel Secretariat Library, Shastry Bhavan, NewDelhi-110001 ಇವರಿಗೆ 9-7-90 ರ ಒಳಗಾಗಿ ಕಳುಹಿಸಬೇಕು ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ. 23-7-90 (ಕನ್ನಡ ಸಂಸ್ಕೃತಿ ಇಲಾಖೆ)

ಆಕಾಶವಾಣಿಯ 'ಚಿಗುರು' ಕಾರ್ಯಕ್ರಮದಲ್ಲಿ ಕೊಪ್ಪದ ವಿದ್ಯಾರ್ಥಿಗೆ ಬಹುಮಾನ

ಕೊಪ್ಪ : ಆಕಾಶವಾಣಿಯವರು ನಡೆಸಿದ 'ಚಿಗುರು' ಕಾರ್ಯಕ್ರಮ ಸರಣಿಯಲ್ಲಿ ಭಾಗವಹಿಸಿ ಕೊಪ್ಪದ ಸರ್ಕಾರಿ ಕಿರಿಯ ಕಾಲೇಜಿನ ಹತ್ತನೆ ತರಗತಿ ವಿದ್ಯಾರ್ಥಿ ಆರ್. ಪ್ರಮೋದ್ ಕುಮಾರ್ ಬಹುಮಾನ ಗಳಿಸಿದ್ದಾರೆ. ರಾಜ್ಯದಾದ್ಯಂತ ನಾಲ್ಕು ನೂರು ಮಕ್ಕಳು ಈ ರೀತಿ ಬಹುಮಾನಕ್ಕೆ ಅರ್ಹರಾಗಿದ್ದಾರೆ.

ಕೊಪ್ಪ ಲಯನ್ಸ್ ಪದವಿ ದಾನ ಸಮಾರಂಭ

ಕೊಪ್ಪ : ಇಲ್ಲಿನ ಲಯನ್ಸ್ ಕ್ಲಬ್‌ನ ನೂತನ ಸಾಲಿನ ಪದಾಧಿಕಾರಿಗಳ ಪದವಿ ದಾನ ಸಮಾರಂಭವನ್ನು ಮಾಜಿ ಲಯನ್ಸ್ ಜಿಲ್ಲಾ ಗೌರ್ನರ್ ಪಿ. ಜಿ. ಗುರ್ಜರ್ ಜೂನ್ 24 ರಂದು ನೆರವೇರಿಸಿ, ಡಾ॥ ಹೇಮಂತ್ ಕುಮಾರ್ ನೇತೃತ್ವದ ಕಳೆದ ಸಾಲಿನ ಪದಾಧಿಕಾರಿಗಳ ವಿವಿಧ ಸಾಧನೆಗಳನ್ನು ಶ್ಲಾಘಿಸಿದರು.

ನೂತನ ಸಾಲಿಗೆ ಎಚ್. ಜಿ. ವೆಂಕಟೇಶ್ ಅಧ್ಯಕ್ಷರಾಗಿಯೂ, ಹೊಸಕೆರೆ ಉಮೇಶ್ ಕಾರ್ಯದರ್ಶಿ ಮತ್ತು ಶರತ್ ಡಿ. ಕಲ್ಲೆ ಖಜಾಂಚಿಯಾಗಿಯೂ ಆಯ್ಕೆಯಾಗಿದ್ದಾರೆ.

ಕೊಪ್ಪ ಘಟಕದ ಈವರೆಗಿನ ಉತ್ತಮ ಸಾಧನೆಗಳನ್ನು ಸರಿಗಟ್ಟುವಂತೆ ಲಯನ್ಸ್‌ನ ಎಲ್ಲಾ ಯೋಜನೆಗಳನ್ನೂ ಯಶಸ್ವಿಗೊಳಿಸಲು ಉತ್ಸಾಹದಿಂದ ಶ್ರಮಿಸುವುದಾಗಿಯೂ, ಕೊಪ್ಪದ ಲಯನ್ಸ್ ಭವನ ನಿರ್ಮಾಣಕ್ಕೆ ಎಲ್ಲ ಪ್ರಯತ್ನ ಮಾಡುವುದಾಗಿಯೂ ವೆಂಕಟೇಶ್ ಸಭೆಯಲ್ಲಿ ತಿಳಿಸಿದರು.

ಶಿಶು ವಿಹಾರ ಉದ್ಘಾಟನೆ

ಹರಿಹರಪುರ : ಇಲ್ಲಿನ ಶಾರದಾ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ 'ಚೈತನ್ಯ ವನ' ಎಂಬ ಶಿಶು ವಿಹಾರ ಜೂನ್ 15ರಂದು ಆರಂಭವಾಗಿದೆ.

ಸದ್ಯ ಎಲ್. ಕೆ. ಜಿ. ತರಗತಿಗಳನ್ನು ನಡೆಸಲಾಗುವುದು. ಮಕ್ಕಳಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡರಲ್ಲೂ ಬೋಧಿಸಲಾಗುವುದು.

ಉತ್ತಮ ಶಿಕ್ಷಣ ನೀಡಲು ಸ್ಥಳೀಯ ಶಿಕ್ಷಣ ತಜ್ಞರು ಹಾಗೂ ಪೋಷಕರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿದೆ ಎಂದು ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿ ಸಚ್ಚಿದಾನಂದ ತಿಳಿಸಿದ್ದಾರೆ.

(ವರದಿ : ಅನಿಲ ಕುಮಾರ)

ಅಡಿಕೆ ಧಾರಣೆ

ಶಿವಮೊಗ್ಗ : 29-6-1990
ಸರಕು : 4101-4589
ಬೆಟ್ಟೆ : 3249-3769
ಗೊರಬಲು : 2401-2649
ಸಾಗರ 29-6-1990
ಇಡಿ : 3509-3716
ಆಪಿ : 4339-4669
ಚಾಲಿ : 2996-3169
ಸಿಪ್ಪೆ ಗೋಟು : 1496-1669

ಬಿಳಾಲುಕೊಪ್ಪದಲ್ಲಿ ಮೇರುತಿ ಜೇಸಿಯಿಂದ ಕೆಸರು ಗದ್ದೆ ಓಟ, ಹಗ್ಗ ಜಗ್ಗಾಟ

ಬಿಳಾಲ್‌ಕೊಪ್ಪ : ಇಲ್ಲಿನ ಮೇರುತಿ ಜ್ಯೂನಿಯರ್ ಛೇಂಬರ್ ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಮಟ್ಟದ ಪುರುಷರ ಹಾಗೂ ಮಹಿಳೆಯರ ಕೆಸರು ಗದ್ದೆ ಓಟದ ಸ್ಪರ್ಧೆ ಮತ್ತು ಕೆಸರು ಗದ್ದೆಯಲ್ಲಿ ಹಗ್ಗ ಜಗ್ಗಾಟದ ಸ್ಪರ್ಧೆಗಳನ್ನು (5 ಜನರ ತಂಡ) 8.7 1990 ನೇ ಭಾನುವಾರ ಏರ್ಪಡಿಸಿದೆ.

ಪ್ರವೇಶ ಶುಲ್ಕ : 5 ರೂಪಾಯಿ; ಹಗ್ಗ ಜಗ್ಗಾಟದ 5 ಜನರ ತಂಡಕ್ಕೆ 25 ರೂ. ಸ್ಥಳ: ಶ್ರೀ ಬಿ. ಕೆ. ವೆಂಕಪ್ಪಯ್ಯನವರ ಕೃಷಿ ಕ್ಷೇತ್ರ, ಅಬ್ಬಿಕಲ್ (ಶಾಂತಿಗ್ರಾಮ-ಬಿಳಾಲುಕೊಪ್ಪ ಮಧ್ಯೆ.)

ಸ್ಪರ್ಧಿಗಳಿಗೆ ಲಘು ಉಪಾಹಾರದ ವ್ಯವಸ್ಥೆ ಇದೆ. ಹೆಚ್ಚಿನ ವಿವರಗಳಿಗೆ : ಕಾರ್ಯಕ್ರಮ ನಿರ್ದೇಶಕರಾದ ಎನ್ ಎಲ್. ನಾಗಭೂಷಣ್ ಅಥವಾ ಅಧ್ಯಕ್ಷೆ ಸುಧಾ ವಿ. ಮೂರ್ತಿಯವರನ್ನು ಸಂಪರ್ಕಿಸಬಹುದು. (ವಿಳಾಸ : ಮೇರುತಿ ಜೇಸಿ, ಬಿಳಾಲುಕೊಪ್ಪ ಅಂಚೆ, ಕೊಪ್ಪ ತಾ॥)

'ಹಂಪನಾ' ಹೆಸರು ದುರುಪಯೋಗ

ಕೊಪ್ಪ : ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಖ್ಯಾತ ಬರಹಗಾರ ಡಾ॥ ಹಂಪ. ನಾಗರಾಜಯ್ಯನವರ ಸಂಬಂಧಿ ಎಂದು ಹೇಳಿಕೊಂಡು ಹಂಪ ರಾಮಕೃಷ್ಣಯ್ಯ ಎಂಬ ವ್ಯಕ್ತಿ ಈ ಸುತ್ತ ಮುತ್ತ ವ್ಯವಹರಿಸುತ್ತಿದ್ದಾರೆಂದೂ, ಆ ವ್ಯಕ್ತಿ ಯಾರೆಂದು ತಮಗೆ ಗೊತ್ತಿಲ್ಲದಿದ್ದು, ಸಾರ್ವಜನಿಕರು ಆತನ ಜೊತೆ ಯಾವುದೇ ರೀತಿ ವ್ಯವಹರಿಸದೆ ಕೂಡಲೇ ಪೋಲೀಸರಿಗೆ ತಿಳಿಸುವುದು ಒಳ್ಳೆಯದೆಂದೂ 'ಹಂಪನಾ' ಹೇಳಿಕೆಯೊಂದನ್ನು ನೀಡಿ ತಿಳಿಸಿದ್ದಾರೆ.

ಕೊಪ್ಪ ಮತ್ತು ಸುತ್ತಮುತ್ತಲ ತಾಲ್ಲೂಕುಗಳ ಜನತೆ ಈ ಬಗ್ಗೆ ಗಮನಿಸಬೇಕಾಗಿ ಅವರು ಕೋರಿದ್ದಾರೆ.

ಹಳೆಯ ಚಂದಾದಾರರಿಗೆಲ್ಲ ಚಂದಾ ಬಾಕಿ ತಿಳಿಸಿದ್ದಾಗಿದೆ. ದೂರದ ಊರುಗಳವರಿಗ ಕಾಗದ ಬರೆದು ತಿಳಿಸಲಾಗುತ್ತಿದೆ ತುಂಬಾ ಹಣ ಬಾಕಿ ಇದೆ ಕೂಡಲೇ ಕಳಿಸಿಕೊಡಿ.

—ಸಂಪಾದಕ

ಪರಿಸರ ಉಳಿಸಬೇಕು—ಆದರೆ ಯಾರಿಗಾಗಿ?

(3ನೇ ಪುಟದಿಂದ)

ಆದರೆ ಒಂದು ವರ್ಗದ ಏಳಿಗೆಗೆ ಇದು ಕಾರಣವಾಗುತ್ತದೆಯೇ ಹೊರತು ಸಮಸ್ತ ಸಮಾಜದ ಏಳಿಗೆ ಇದರಿಂದಾಗದು

ಜಂಬೂ ದ್ವೀಪಕ್ಕೆ ವಲಸೆ ಬಂದ ಆರ್ಯರು ಇಲ್ಲಿನ ದ್ರಾವಿಡರನ್ನು ಮೂಲೆ ಗುಂಪು ಮಾಡಿ ಕಾಡಿಗೆ ಓಡಿಸಿದರು. ಕಾಡೊಳಗೆ ಪ್ರಕೃತಿ ಮಾತೆಯ ಮಡಿಲಲ್ಲಿ ಬದುಕುಳಿದ ಈ ಜನರನ್ನು ಇತ್ತೀಚಿಗೆ ಅಲ್ಲಿಗೂ ನುಗ್ಗಿ ಬಲಿ ಹಾಕಲಾಯ್ತು. ಮುಂದೆ ಓಡಲು ಜಾಗವಿಲ್ಲದ್ದರಿಂದ ಈ ಆರ್ಯರಿಗೆ (ನಾಗರಿಕರು? ಅವರು ಅಡಿಯಾಳಾದರು

ಈಗ ಹೇಳಿ-ಪರಿಸರವನ್ನು ಯಾರಿಗಾಗಿ ಉಳಿಸಬೇಕು? ಅಯ್ಯನ ಮನೆಯಲ್ಲಿ ಮೂರು ಕಾಸಿಗೆ ದುಡಿಯುವ 'ಭಯ್ಯ'ನಿಗಾಗಿಯೆ? ಅಥವಾ ರೈತ ಎಂಬ ಹೆಸರಲ್ಲಿ ನೂರಾರು ಎಕರೆ ನುಂಗಿ ನೀರು ಕುಡಿದು ಈಗ ಸಾಲ ಮನ್ನಾದ ಬೊಬ್ಬೆ ಹೊಡೆಯುವ ಮಂದಿಗಾಗಿಯೇ? ಇಂದಿಗೂ ಸಹ ಮಾನವರನ್ನು ಜೀವಂತ ಸುಡುವ ಮಂದಿಗಾಗಿಯೆ? ಸುಡಲ್ಪಡುವ ಮಂದಿಗಾಗಿಯೇ? ಒಂದು ಭೋಜನಕ್ಕೆ 500 - 1000 ರೂ. ಕೊಟ್ಟು ತಿನ್ನುವ ಮಂದಿಗಾಗಿಯೇ ಅಥವಾ ತೊಟ್ಟಿಯಲ್ಲಿ ಬಿದ್ದ ಎಂಜಲು ಅನ್ನಕ್ಕೆ ಕಿತ್ತಾಡುವ ಜನರಿಗಾಗಿಯೆ? ಈ ಎರಡೂ ರೀತಿ ನಾಶಗೊಳ್ಳುತ್ತಾ ನಡೆದಿರುವ ಜನರಿಗೆ ಪರಿಸರ ಇದ್ದರೇನು? ಇಲ್ಲದಿದ್ದರೇನು? ಸೀಮಿತ ಪರಿಸರ ನಾಶದಿಂದ ಅವರ ಏಳಿಗೆ ಆಗುವುದಿದ್ದರೆ ಆಗಲಿ ಬಿಡಿ.

ಪರಿಸರ ಉಳಿದರೂ ಅಳಿದರೂ ಅದು ಈ ದೇಶದ ಶೇ. 60 ಭಾಗ ಜನ ಸಾಮಾನ್ಯನ ಮೇಲೆ ಬೀರುವ ಪರಿಣಾಮ ಒಂದೇ. ಇದಕ್ಕೆ ಉದಾಹರಣೆ : ಸಹಸ್ರಾರು ವರ್ಷಗಳ ಹಿಂದಿನ ಭಾರತದ ಇತಿಹಾಸ ಹಾಗೂ ನಂತರದ ನಾಗರಿಕ ಭಾರತದ ಇತಿಹಾಸವೂ ಅದೇ ರೀತಿ ಇದೆ.

ಕೊನೆಯದಾಗಿ : ಪರಿಸರ ಎಂದಿಗೂ ನಾಶವಾಗದು. ಒಂದೊಮ್ಮೆ ನಾಶಗೊಳಿಸಿದರೆ, ನಾಶಗೊಳಿಸಿದ 'ಕಿರಾತಕರು' ಅಂತ್ಯಗೊಳ್ಳುವರು. ಪ್ರಕೃತಿ ಪುನಃ ಮರುಹುಟ್ಟು ಪಡೆಯುವುದು. ಜೀವ ವಿಕಾಸಗೊಳ್ಳುವುದು. ನಮಗೆ ಶುದ್ಧವೆನಿಸುವ ಪರಿಸರ ಇನ್ನೊಂದು ಜೀವಿಗೆ ಅಶುದ್ಧವಾಗಬಹುದಲ್ಲವೇ? ಪರಿಸರದ ರಕ್ಷಣೆಗೆ ಹೋರಾಟ ಸರಿ. ಆದರೆ ಅದಕ್ಕಿಂತಲೂ ಮುಖ್ಯ ಮಾನವನ ಸಾಮಾಜಿಕ ಪರಿಸರದ ರಕ್ಷಣೆ.

—ಕೃಷ್ಣ ಭಂಡಾರಿ
ಬೆಂಗಳೂರು.

(ಓದುಗರ ಪ್ರತಿಕ್ರಿಯೆಗೆ ಸ್ವಾಗತವಿದೆ. — ಸಂ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ